ಸೆಲೆಬ್ರಿಟಿ

■ ಹನಿ

# ದುಬಾರಿ ಜಡ್ಜ್!



**ಮೊ**ನ್ನೆ ಜುಲೈ 24 ರಂದು 43ಕ್ಕೆ ಕಾಲಿಟ್ಟಿರುವ ಜೆನಿಫರ್ ಲೋಪೆಜ್, ಹಾಲಿವುಡ್‌ನಲ್ಲಿ ಇವತ್ತಿಗೂ ಖದರ್ ಉಳಿಸಿಕೊಂಡಿರುವ ತಾರೆ. ಈಗಲೂ ಆಕೆಯ 'ಗಾನಾ ಬಜಾನಾ' ಲೈವ್ ಷೋಗೆ ಜನ ಕಿಕ್ಕಿರಿದು ಸೇರುತ್ತಾರೆ. ಮ್ಯೂಸಿಕ್ ಆಲ್ಬಂಗಳು 'ಹಾಟ್ ಸೇಲ್' ಕಾಣುತ್ತಿವೆ. ಹಾಗೆಂದೇ ಹಣ ಆಕೆಯ ಪದತಲದಲ್ಲಿ ಬಂದು ಬೀಳುತ್ತಿದೆ. ಇದೀಗ ಫಾಕ್ಸ್ ಟಿವಿಯ ಜನಪ್ರಿಯ 'ಅಮೆರಿಕನ್ ಐಡಲ್' ಕಾರ್ಯಕ್ರಮದ 11ನೇ ಸೀಸನ್‌ಗೆ ಮತ್ತೆ ಆಕೆ ಜಡ್ಜ್ ಆಗಿ ಆಯ್ಕೆಯಾಗಿದ್ದಾರೆ. ಈ ಹಿಂದಿನ ಸೀಸನ್‌ನಲ್ಲಿ ಜಡ್ಜ್ ಆಗಲು ಆಕೆಗೆ 1.2 ಕೋಟಿ ಡಾಲರ್ ಸಂಭಾವನೆ ನೀಡಲಾಗಿತ್ತು. ಈ ಸಲ ಆಕೆಯ ರೇಟ್ ಇನ್ನಷ್ಟು ಹೆಚ್ಚಾಗಿದೆ. ಭರ್ತಿ 2 ಕೋಟಿ ಡಾಲರ್ ಸಂಭಾವನೆಗೆ ಫಾಕ್ಸ್ ಟಿವಿ ಒಪ್ಪಿಕೊಂಡಿದೆ! ರಿಯಾಲಿಟಿ ಷೋನಲ್ಲಿ ಜಡ್ಜ್ ಒಬ್ಬರು ಪಡೆದಿರುವ ಅತ್ಯಧಿಕ ಮೊತ್ತದ ಸಂಭಾವನೆ ಇದು ಎನ್ನಲಾಗಿದೆ. ಈಕೆಯ ಜತೆಗೆ ರ್‍ಯಾಂಡಿ ಜಾಕ್ಸನ್ ಮತ್ತು ಸ್ಟೀವನ್ ಟೈಲರ್ ಕೂಡಾ ಜಡ್ಜ್ ಆಗಿ ಮರಳಿದ್ದಾರೆ.

ಕೆಲವು ವಾರಗಳ ಹಿಂದೆಯಷ್ಟೇ ತನ್ನ ಮೂರನೇ ಗಂಡ ನಟ ಮಾರ್ಕ್ ಆ್ಯಂಟನಿಗೆ ವಿಚ್ಛೇದನ ಕೊಟ್ಟ ಜೆ ಲೋ, ಮತ್ತೆ ಪ್ರೀತಿಗಾಗಿ ಹಾತೊರೆಯುತ್ತಿದ್ದಾರಂತೆ. ಕಳೆದ ಏಳು ವರ್ಷಗಳಿಂದ ಜತೆಯಾಗಿದ್ದ ಆ್ಯಂಟನಿಯ ಜತೆಗಿನ ಭಿನ್ನಮತ ಏನು ಎನ್ನುವುದು ಇನ್ನೂ ಗೊತ್ತಾಗಿಲ್ಲ. 'ನಮ್ಮ ಮದುವೆ ಬರ್ಖಾಸ್ತಾಗಿದೆ; ಸಹನಟನೆ ಅಲ್ಲ' ಎಂದಿರುವ ಈಕೆ, ಈಗಾಗಲೆ ಮಾರ್ಕ್ ಜತೆಗೆ 'ಕ್ಯು ವಿವಾ' ಎನ್ನುವ ಚಿತ್ರದಲ್ಲಿ ನಟಿಸುತ್ತಿದ್ದಾರೆ. 'ಈಗಲೂ ಪ್ರೀತಿ ಎನ್ನುವುದು ನನ್ನ ದೊಡ್ಡ ಕನಸು' ಎಂದು ಹೊಸ ಸಂಗಾತಿಗೆ ಒಂದು ಅರ್ಜಿ ಗುಜರಾಯಿಸಿರುವ ಜೆ ಲೋಳನ್ನು ಮದುವೆಯಾಗಲು ಹಾಲಿವುಡ್‌ನಲ್ಲಿ ನಟರ ದೊಡ್ಡ ಕ್ಯೂ ಇದೆ. ಆದರೆ ಆಕೆ ಅಷ್ಟು ಸುಲಭವಾಗಿ ಯಾರಿಗೂ ಒಲಿಯುವವಳಲ್ಲ ಎನ್ನುವುದು ಹಿಂದೆಯೂ ಸಾಬೀತಾಗಿದೆ.

5ರ ಎಳವೆಯಲ್ಲೇ ಹಾಡು–ಕುಣಿತ ಆರಂಭಿಸಿರುವ ಜೆ ಲೋ ಸಂಪಾದಿಸಿರುವ ಆಸ್ತಿಯೂ ದೊಡ್ಡದಿದೆ. ಈ ಹಿಂದೆ ಈಕೆಯ ತನ್ನ ಅಂಗಾಂಗಳ ಮೇಲೆ ಒಂದು ಶತಕೋಟಿ ಡಾಲರ್‌ಗೆ ವಿಮೆ ಮಾಡಿಸಿದ್ದಾಳೆ ಎನ್ನುವುದು ದೊಡ್ಡ ಗಾಳಿಸುದ್ದಿಯಾಗಿತ್ತು. ಮಾರ್ಕ್ ಮದುವೆಯಾದ ಬಳಿಕ ಹುಟ್ಟಿದ ಈಕೆಯ ಅವಳಿ–ಜವಳಿ ಮಕ್ಕಳ ಫೋಟೋಗೆ 'ಪೀಪಲ್' ಮ್ಯಾಗಸಿನ್ 60 ಲಕ್ಷ ಡಾಲರ್ ನೀಡಿತ್ತು! ಎಷ್ಟೇ ದುಡ್ಡಿದ್ದರೂ ಪ್ರೀತಿಗಾಗಿ ಈಕೆಯ ತಹತಹ ತಪ್ಪಿಲ್ಲ.

# ಟಿಬೆಟ್ ಪ್ರಧಾನಿ



**ಡಾ.**ಲೋಬ್‌ಸ್ಯಾಂಗ್ ಸಾಂಗೇ ಇದೀಗ ಟಿಬೆಟ್ ದೇಶಭ್ರಷ್ಟ ಸರಕಾರದ ಹೊಸ ಕಲೋನ್ ಟ್ರಿಪಾ– ಅಂದರೆ ಪ್ರಧಾನ ಮಂತ್ರಿ. ಜಗತ್ತಿನ ಅತ್ಯಂತ ಜನಪ್ರಿಯ ಧರ್ಮಗುರು ದಲಾಯಿ ಲಾಮಾ ಅವರ ರಾಜಕೀಯ ಉತ್ತರಾಧಿಕಾರಿಯಾಗಿ ಡಾ.ಸಾಂಗೇ ಪ್ರಜಾಪ್ರಭುತ್ವದ ಮಾದರಿಯಲ್ಲಿ ಆಯ್ಕೆಯಾಗಿದ್ದಾರೆ. ಹಿಂದೆಲ್ಲ 'ನೇಮಕ' ನಡೆಯುತ್ತಿದ್ದ ಈ ಹುದ್ದೆಗೆ ಜನಪ್ರಿಯ 'ಆಯ್ಕೆ' ನಡೆದಿರುವುದು ಇದೇ ಮೊದಲು. ದಲಾಯಿ ಲಾಮಾ ಇನ್ನು ಮುಂದೆ ಟಿಬೆಟಿಯನ್ನರ 'ಆಧ್ಯಾತ್ಮಿಕ ಗುರು'ವಾಗಿಯಷ್ಟೇ ಉಳಿಯಲಿದ್ದಾರೆ. ರಾಜಕೀಯ ನೇತೃತ್ವ ಡಾ.ಸಾಂಗೇ ಅವರದ್ದು.

ಸಾಂಗೇ ಹುಟ್ಟಿದ್ದು ಡಾರ್ಜಿಲಿಂಗ್‌ನಲ್ಲಿ. ಇನ್ನೂ 43ರ ಹರೆಯ. ದೇಶವೇ ಇಲ್ಲದ ಸರಕಾರವೊಂದರ ಮುಖ್ಯಸ್ಥರಾಗುವ; ದೇಶಕ್ಕಾಗಿ ಸ್ವಂತ ಭೂಮಿಯನ್ನು ಮಾಡಿ ಕೊಳ್ಳುವ ಕಷ್ಟಸಾಧ್ಯ ಕೆಲಸ ಇವರ ಹೆಗಲಿಗೇರಿದೆ. 'ಚೀನಾದ ಜತೆ ಎಲ್ಲಿ ಬೇಕಾದರೂ ಕುಳಿತು ಮಾತನಾಡಲು ಸಿದ್ಧ' ಎಂದು ಪ್ರಧಾನಿಯಾದ ತಕ್ಷಣ ಡಾ.ಸಾಂಗೇ ಹೇಳಿಕೆ ನೀಡಿದರು. ಆದರೆ ಚೀನಾ ಆ ಹೇಳಿಕೆಗೆ ಕವಡೆಕಾಸಿನ ಕಿಮ್ಮತ್ತೂ ಕೊಟ್ಟಿಲ್ಲ. ಮುಂದಿನ ದಾರಿ ಎಷ್ಟು ದುರ್ಗಮ ಎನ್ನುವುದಕ್ಕೆ ಇದು ದಿಕ್ಸೂಚಿ.

ಲೋಬ್‌ಸ್ಯಾಂಗ್ ಸಾಂಗೇ ದೆಹಲಿ ವಿಶ್ವವಿದ್ಯಾಲಯದಲ್ಲಿ ಬಿಎ, ಎಲ್‌ಎಲ್‌ಬಿ ಮಾಡಿ, ಹಾರ್ವರ್ಡ್ ವಿವಿ ಯಲ್ಲಿ ಎಲ್‌ಎಲ್‌ಎಂ ಪದವಿ ಪಡೆದವರು. ಟಿಬೆಟ್‌ನ ಹಾಗೂ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಕುರಿತು ಎಕ್ಸ್‌ಪರ್ಟ್ ಎಂದು ಈಗಾಗಲೆ ಹೆಸರು ಪಡೆದಿದ್ದಾರೆ. ಹಾರ್ವರ್ಡ್ ಲಾ ಸ್ಕೂಲ್‌ನ ವಿಸಿಟಿಂಗ್ ರಿಸರ್ಚ್ ಫೆಲೋ ಕೂಡಾ ಹೌದು. ಆದರೆ ಟಿಬೆಟ್ ಬಿಟ್ಟು ಹೊರಜಗತ್ತಿಗೆ ಇವರ ಪರಿಚಯ ಅಷ್ಟಕ್ಕಷ್ಟೆ. ತಮ್ಮ ರಾಜಕೀಯ ನಿಲುವುಗಳಲ್ಲಿ 'ಅಮೆರಿಕಾ ಪರ' ಎಂದು ಈಗಾಗಲೆ ಗುರುತಿಸಿಕೊಂಡಿರುವ ಡಾ.ಸಾಂಗೇ, ಚೀನಾವನ್ನು ಒಲಿಸುವುದರ ಜತೆಗೆ ಉಗ್ರರಾಗುತ್ತಿರುವ ಟಿಬೆಟ್ ಯುವಜನತೆಯನ್ನು ಹೇಗೆ ರಚನಾತ್ಮಕವಾಗಿ ಸಂಘಟಿಸುತ್ತಾರೆ ಎನ್ನುವುದು ಕುತೂಹಲಕರ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65